ಕರ್ನಾಟಕ ವಿಧಾನಸಭೆ

ಸೋಮವಾರ 28ನೇ ಜನವರಿ 2002ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಎಂ.ವಿ.ವೆಂಕಟಪ್ಪ ಅವರು ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು:- ಮಾನ್ಯ ಗುಂಡಪ್ಪ ವಕೀಲರ ಪ್ರಶ್ನೆಗೆ ಕಾಲಾವಕಾಶವನ್ನು ಕೇಳಿದ್ದಾರೆ. ಈಗ ಮಾನ್ಯ ಯು.ಆರ್.ಸಭಾಪತಿಯವರು ಪ್ರಶ್ನೆಯನ್ನು ಕೇಳಬೇಕು.

ಬಾಲ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 65(1459)

ಸದಸ್ಯರ ಹೆಸರು : ಶ್ರೀ ಸಭಾಪತಿ ಯು.ಆರ್.(ಉಡುಪಿ)

ಉತ್ತರಿಸುವ ಸಚಿವರು : ಶ್ರೀ ಎ.ಎಂ.ಹಿಂಡಸಗೇರಿ(ಕಾರ್ಮಿಕ ಮತ್ತು ವಕ್ಫ್ ಸಚಿವರು)

ಪ್ರಶ್ನೆ

ಅ. 2001-02ನೇ ಸಾಲಿನಲ್ಲಿ ಈ ವರೆಗೆ ರಾಜ್ಯದಲ್ಲಿ ಎಷ್ಟು ಬಾಲ ಕಾರ್ಮಿಕರನ್ನು ಗುರುತಿಸಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಆ. ಇವರ ಬಗ್ಗೆ ಯಾವ ಕಲ್ಯಾಣ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರ ಹಮ್ಮಿಕೊಂಡಿದೆ? (ಜಿಲ್ಲಾವಾರು ವಿವರ ನೀಡುವುದು)

ಇ. 2001-02ರ ಸಾಲಿನಲ್ಲಿ ಈ ಕಲ್ಯಾಣ ಕಾರ್ಯಕ್ರಮಕ್ಕಾಗಿ ಬಿಡುಗಡೆಯಾದ ಹಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಉತ್ತರ

ಅ. ಬಾಲ ಕಾರ್ಮಿಕ ನಿರ್ಮೂಲನಾ ಕ್ರಿಯಾ ಯೋಜನೆ ಅಡಿಯಲ್ಲಿ ಕರ್ನಾಟಕ ರಾಜ್ಯಾದ್ಯಾಂತ ಎಲ್ಲಾ 27 ಜಿಲ್ಲೆಗಳಲ್ಲಿ ಬಾಲ ಕಾರ್ಮಿಕರ ಸಮೀಕ್ಷೆಯನ್ನು ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ನಡೆಸಲಾಗುತ್ತಿದೆ.

ಸಮೀಕ್ಷೆ ಕೆಲಸವು ನವೆಂಬರ್ 30, 2001ರ ಅಂತ್ಯದ ವೇಳೆಗೆ ಮುಗಿಸಬೇಕೆಂದು ಸೂಚನೆ ನೀಡಿದ್ದರೂ ಜಿಲ್ಲಾಧಿಕಾರಿಗಳು ಕಾಲಾವಕಾಶ ಕೇಳಿರುತ್ತಾರೆ.

ಸಮೀಕ್ಷೆ ಮುಗಿದು ಸಮೀಕ್ಷೆಯ ವಿವರಗಳು ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ಬಂದ ತಕ್ಷಣ ಬಾಲ ಕಾರ್ಮಿಕರ ಜಿಲ್ಲಾವಾರು ಮಾಹಿತಿಯನ್ನು ಒದಗಿಸಲಾಗುವುದು.

ಆ. ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯವನ್ನು 2007 ಅಂತ್ಯದೊಳಗೆ "ಬಾಲ ಕಾರ್ಮಿಕ ಮುಕ್ತ" ರಾಜ್ಯವನ್ನಾಗಿ ಮಾಡಲು ಬಾಲ ಕಾರ್ಮಿಕ ನಿರ್ಮೂಲನಾ ಕ್ರಿಯಾ ಯೋಜನೆಯನ್ನು ದಿ:31.05.2001ರಂದು ಜಾರಿಗೆ ತಂದಿದೆ. ಈ ಯೋಜನೆ ಅಡಿಯಲ್ಲಿ 06 ವರ್ಷಗಳ ಅವಧಿಯಲ್ಲಿ ರಾಜ್ಯವನ್ನು ಬಾಲ ಕಾರ್ಮಿಕ ರಹಿತ ರಾಜ್ಯವನ್ನಾಗಿ ಮಾಡಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಈ ಯೋಜನೆಯ ಮೊದಲನೆಯ ಕಾರ್ಯಕ್ರಮವಾಗಿ ಜಿಲ್ಲಾಡಳಿತ ಮತಿಯಿಂದ ಬಾಲ ಕಾರ್ಮಿಕರ ಸಮೀಕ್ಷೆ ಕೆಲಸವನ್ನು ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ನಡೆಯುತ್ತಿದೆ.

2. ಅಲ್ಲದೇ ಜಿಲ್ಲಾಡಳಿತವು ಮುಖ್ಯ ವಾಹಿನಿ ಶಾಲೆಗೆ ದಾಖಲು ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಡಳಿತವು ಸಮೀಕ್ಷೆಯ ಸಮಯದಲ್ಲಾಗಲೀ ಅಥವಾ ಕೆಲಸದಿಂದ ಹಿಂತೆಗೆದುಕೊಂಡ ಸಮಯದಲ್ಲಾಗಲೀ ಬಾಲ ಕಾರ್ಮಿಕರ ಪುನರ್ ವಸತಿ ಕೇಂದ್ರದಲ್ಲಿ ಸೇರಿಸುವ ಅಗತ್ಯ ಇಲ್ಲದಿದ್ದ ಪಕ್ಷದಲ್ಲಿ ಅಂತಹ ಮಕ್ಕಳನ್ನು ನೇರವಾಗಿ ಮುಖ್ಯವಾಹಿನಿ ಶಾಲೆಗೆ ಸೇರಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

3. ಬಾಲ ಕಾರ್ಮಿಕರ ಸಮೀಕ್ಷೆ ಮುಗಿದ ತಕ್ಷಣ ಗುರುತಿಸಿದ ಬಾಲ ಕಾರ್ಮಿಕರ ಅನುಗುಣವಾಗಿ ಎಲ್ಲಾ ಜಿಲ್ಲೆಗಳಲ್ಲಿ ಅವಶ್ಯಕತೆ ಇರುವ ವಿಶೇಷ ವಸತಿ ಶಾಲೆಗಳನ್ನು ತೆರೆಯಲಾಗುವುದು.

4. ಈ ವಸತಿ ಶಾಲೆಗಳಲ್ಲಿ ಕೆಲಸದಿಂದ ಹಿಂತೆಗೆದುಕೊಂಡ ಬಾಲ ಕಾರ್ಮಿಕರಿಗೆ ಪುನರ್ ವಸತಿ ಕಲ್ಪಿಸಲಾಗುವುದು.

ಪುನರ್ ವಸತಿ ಅಂದರೆ:

ವಸತಿ ಅನೌಪಚಾರಿಕ ಶಿಕ್ಷಣ, ಪೌಷ್ಟಿಕ ಆಹಾರ, ಆರೋಗ್ಯ ತಪಾಸಣೆ, ಮಕ್ಕಳಿಗೆ ಇಚ್ಛೆ ಇರುವಲ್ಲಿ ವೃತ್ತಿ ಶಿಕ್ಷಣ ನೀಡಿ ಅವರ ವಿದ್ಯಾಭ್ಯಾಸ ಮಟ್ಟದ ಬಗ್ಗೆ ಪರಿಶೀಲಿಸಿ ಮುಖ್ಯ ವಾಹಿನಿ ಶಾಲೆಗಳಲ್ಲಿ ಅರ್ಹ ತರಗತಿಗಳಿಗೆ ದಾಖಲು ಮಾಡುವುದು.

ಇ, ರಾಜ್ಯ ಬಾಲ ಕಾರ್ಮಿಕ ನಿರ್ಮೂಲನಾ ಕ್ರಿಯಾ ಯೋಜನೆ ಅನುಷ್ಠಾನಗೊಳಿಸುವ ಸಲುವಾಗಿ 2001-02ನೇ ಸಾಲಿನಲ್ಲಿ ರಾಜ್ಯ ಸರ್ಕಾರವು 27 ಜಿಲೆಯ ಜಿಲಾಧಿಕಾರಿಗಳಿಗೆ ರೂ.98 ಲಕ್ಷಗಳನ್ನು ಹಣ ಬಿಡುಗಡೆ ಮಾಡಲಾಗಿದೆ.

ಬಿಡುಗಡೆಯಾದ ಜಿಲ್ಲಾವಾರು ಹಣದ ವಿವರಗಳನ್ನು ಅನುಬಂಧದಲ್ಲಿ ವಿವರಿಸಲಾಗಿದೆ. ಅನುಬಂಧ ಲಗತ್ತಿಸಿದೆ.

ಅನುಬಂಧ

ಬಾಲ ಕಾರ್ಮಿಕ ನಿರ್ಮೂಲನೆಗಾಗಿ ಕ್ರಿಯಾ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಲುವಾಗಿ 27 ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ರೂ.98 ಲಕ್ಷಗಳನ್ನು 2001-02ನೇ ಸಾಲಿಗೆ ಬಿಡುಗಡೆ ಮಾಡಿದ ವಿವರಗಳು.

ರೂ.ಲಕ್ಷ ಗಳಲ್ಲಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	2001-02ನೇ ಸಾಲಿಗೆ ಬಿಡುಗಡೆ ಮಾಡಿದ ಮೊತ್ತ
1.	ಕಾರ್ಮಿಕ ಆಯುಕ್ತರು	5.0
2.	ಬೆಂಗಳೂರು (ನಗರ)	2.0
3.	ಬೆಂಗಳೂರು (ಗ್ರಾಮಾಂತರ)	2.0
4.	ಬಳ್ಳಾರಿ	5.0
5.	ಬಾಗಲಕೋಟೆ	3.0
6.	ಬೀದರ್	5.0
7.	ಬೆಳಗಾಂ	4.0
8.	ಬಿಜಾಪುರ	2.0
9.	ಚಾಮರಾಜನಗರ	4.0
10.	ಚಿಕ್ಕಮಗಳೂರು	3.0
11.	ಚಿತ್ರದುರ್ಗ	4.0
12.	ದಕ್ಷಿಣ ಕನ್ನಡ	4.0
13.	ದಾವಣಗೆರೆ	4.0
14.	ಧಾರವಾಡ	2.0

15.	ಗದಗ	1.0
16.	ಗುಲ್ಬರ್ಗಾ	5.0
17.	ಹಾಸನ	5.0
18.	ಹಾವೇರಿ	1.0
19.	ಕೊಡಗು	3.0
20.	ಕೋಲಾರ	5.0
21.	ಕೊಪ್ಪಳ	4.0
22.	ಮಂಡ್ಯ	4.0
23.	ಮೈಸೂರು	5.0
24.	ರಾಯಚೂರು	2.0
25.	ಶಿವಮೊಗ್ಗ	4.0
26.	ತುಮಕೂರು	4.0
27.	ಉಡುಪಿ	3.0
28.	ಉತ್ತರ ಕನ್ನಡ	3.0
	ಒಟ್ಟು	98.0

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಸಭಾಧ್ಯಕ್ಷರೇ, ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರದವರು ಒಂದು ಕ್ರಿಯಾ ಯೋಜನೆಯನ್ನು 31-5-2001ರಂದು ಮಾಡಿದ್ದಾರೆ. 30-11-2001ರೊಳಗೆ ಸಮೀಕ್ಷೆ ಮುಗಿಯಬೇಕು ಎಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದಿಷ್ಟವಾದಂಥ ಆದೇಶವನ್ನು ಕೊಟ್ಟಿದ್ದಾರೆ. ಈ ದಿನ ತಾರೀಖು 28-1-2002. ಅಂದರೆ ಈ ಯೋಜನೆಯನ್ನು ಜಾರಿಗೆ ತಂದು ಈಗಾಗಲೇ 8 ತಿಂಗಳು ಕಳೆದಿದೆ. ಈಗಾಗಲೇ ಇದಕ್ಕೆ 98 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಹಿಂದೆ ಸ್ವರ್ಣ ಜಯಂತಿ ರೋಜಗಾರ್ ಯೋಜನೆಯಲ್ಲಿ ಬಂದ ಹಣದಿಂದ ಎಲ್ಲಾ ಜಿಲ್ಲಾಧಿಕಾರಿಗಳು ಆಫೀಸರ್ಸ್ ಕ್ಲಬ್ ಕಟ್ಟಿಕೊಂಡರು, ಪ್ರಕೃತಿ ವಿಕೋಪದ ಹಣದಿಂದ ಮನೆಗಳನ್ನು ಕಟ್ಟಿಸಿಕೊಂಡರು. ಈಗ ಬಾಲ ಕಾರ್ಮಿಕ ಕಲ್ಯಾಣಕ್ಕೋಸ್ಕರ ಕೊಟ್ಟಂಥ ಹಣ ಏನಾಗಿದೆ, ಅದು ಎಲ್ಲಿ ಹೋಗಿದೆ ಎಂಬುದರ ಬಗ್ಗೆ ರಿವ್ಯೂ ಮಾಡಬೇಕಾಗಿದೆ. ಏಕೆಂದರೆ, ಅವರು ಇನ್ನೂ ಸಮೀಕ್ಷೆಯನ್ನು ಮಾಡಿರುವುದಿಲ್ಲ. ಬಾಲ ಕಾರ್ಮಿಕರ ಬಗ್ಗೆ ಮಾನ್ಯ ಮಂತ್ರಿಗಳು ಬಹಳ ಕ್ರಿಯಾಶೀಲರಾಗಿದ್ದಾರೆ. ಆದರೆ ಅಧಿಕಾರಿಗಳು ಇದರ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ. ಜಿಲ್ಲಾಧಿಕಾರಿಗಳು ಇದರ ಬಗ್ಗೆ ಸ್ವಲ್ಪವೂ ಆಸಕ್ತಿ ವಹಿಸುತ್ತಿಲ್ಲ. ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಬಿಡುಗಡೆಯಾಗಿರುವ 98 ಲಕ್ಷ ರೂಪಾಯಿಗಳ ಹಣ ಎಲ್ಲೆಲ್ಲಿ ಡೈವರ್ಟ್ ಆಗಿದೆ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಸಮೀಕ್ಷೆ ಮಾಡಬೇಕು ಮತ್ತು ಒಂದು ನಿರ್ದಿಷ್ಟ ದಿನಾಂಕದೊಳಗೆ ಸಮೀಕ್ಷೆಯನ್ನು ಮುಗಿಸಿ ನಮಗೆ ಉತ್ತರವನ್ನು ಕೊಡುವ ಹಾಗೆ ಮಾಡಬೇಕು.

ಶ್ರೀ ಎ.ಎಂ.ಹಿಂಡಸಗೇರಿ:- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ನಮ್ಮ ಕಡೆಯಿಂದ ಒಂದು ಕ್ರಿಯಾ ಯೋಜನೆಯನ್ನು ಮಾಡಿದ್ದು ಮೊದಲ ಹಂತದಲ್ಲಿ ರಾಜ್ಯದ ಎಲ್ಲ 27 ಜಿಲ್ಲೆಗಳಲ್ಲಿ ಸರ್ವೆ ಮಾಡಿ ಬಾಲ ಕಾರ್ಮಿಕರು ಎಷ್ಟಿದ್ದಾರೆ ಎಂದು ನೋಡಿಕೊಂಡು ಮುಂದಿನ ಕೆಲಸ ಮಾಡಬೇಕು ಎನ್ನುವ ಉದ್ದೇಶದಿಂದ ಈಗಾಗಲೇ ಈ ಯೋಜನೆಗೆ 98 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಕಳೆದ ನವೆಂಬರ್ ಕೊನೆಯ ವೇಳೆಗೆ ಈ ಸರ್ವೆಯನ್ನು ಪೂರ್ಣಗೊಳಿಸಿ ಮುಂದಿನ ಕಾರ್ಯ ಪ್ರಾರಂಭ ಮಾಡಬೇಕು ಎಂದು ಸಮಯವನ್ನು ನಿಗದಿಪಡಿಸಿದ್ದೆವು. ಆದರೆ ಜಿಲ್ಲಾಧಿಕಾರಿಗಳು, ತಮಗೆ ಕಾರ್ಯದ ಒತ್ತಡವಿರುವ ಕಾರಣ ಇನ್ನೂ ಎರಡು ತಿಂಗಳು ಸಮಯವನ್ನು ಕೇಳಿದ್ದಾರೆ. ಅದು ಈ ಜನವರಿ ತಿಂಗಳಲ್ಲಿ ಪೂರ್ಣವಾಗುತ್ತದೆ. ನಮ್ಮ ಕಾರ್ಯದರ್ಶಿಯವರು ಪ್ರತಿ ಡಿವಿಷನ್‌ನಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳೊಂದಿಗೆ ಸಭೆಯನ್ನು ಮಾಡಿದ್ದಾರೆ. ತಕ್ಷಣವೇ, ಅಂದರೆ ಈ ತಿಂಗಳ ಕೊನೆಯಲ್ಲಿ ಸರ್ವೆ ಮುಗಿದ ನಂತರ ಮುಂದಿನ ಕಾರ್ಯವನ್ನು ಮಾಡಲು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್.ಸುರೇಶ್ ಕುಮಾರ್:- ಸನ್ಮಾನ್ಯ ಸಭಾಧ್ಯಕ್ಷರೇ, ಬಾಲ ಕಾರ್ಮಿಕ ಪದ್ಧತಿಗೆ ಕಾನೂನಿನಲ್ಲಿ ಮನ್ನಣೆ ಇಲ್ಲ. ಬಾಲ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವುದೇ ಒಂದು ಅಪರಾಧ. ಆದರೆ ನಮ್ಮೆಲ್ಲರ ಕಣ್ಣೆದುರಿಗೇ, ಬಾಲ ಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದು, ಅವರಿಂದ ದುಡಿಸಿ ಕೊಳ್ಳುವುದನ್ನು ನಾವು ನೋಡುತ್ತಿದ್ದೇವೆ. ಮಾನ್ಯ ಸಚಿವರು ಉತ್ತರ ಕೊಡುತ್ತಾ

ಬಾಲ ಕಾರ್ಮಿಕರ ಸಮೀಕ್ಷೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸಮೀಕ್ಷೆ ಮಾಡುವುದು ಈ ಬಾಲ ಕಾರ್ಮಿಕ ನಿರ್ಮೂಲನಾ ಕ್ರಿಯಾ ಯೋಜನೆಯ ಒಂದು ಭಾಗ. ಅದಕ್ಕೆ ಅವರು ಟೈಂ ಎಕ್ಸ್‌ಟೆನ್‌ಷನ್‌ನನ್ನು ಎರಡು ತಿಂಗಳು ಕೇಳುತ್ತಾರೋ, ಆರು ತಿಂಗಳು ಕೇಳುತ್ತಾರೋ, ಅದು ಅವರಿಗೆ ಸೇರಿದ್ದು. Extension of time is the order of the day. ಅದನ್ನು ಅವರು ಮಾಡಿಕೊಳ್ಳಲಿ. ಆದರೆ ಬಾಲ ಕಾರ್ಮಿಕರು ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹುಡುಕಿ ತಕ್ಕ ಕ್ರಮ ತೆಗೆದುಕೊಳ್ಳುವ ಕೆಲಸವನ್ನು ಕಾರ್ಮಿಕ ಇಲಾಖೆಯವರು ಏಕೆ ಮಾಡುತ್ತಿಲ್ಲ? ಇವತ್ತು ಪತ್ರಿಕೆಗಳಲ್ಲಿ ಬಂದಿದೆ. ಮಾಗಡಿಯ 80 ಬಾಲಕ ಬಾಲಕಿಯರನ್ನು ಯಾವುದೋ ಒಂದು ಎನ್.ಜಿ.ಓ. ಸಂಸ್ಥೆಯವರು ಬೆಂಗಳೂರಿಗೆ ಕರೆದುಕೊಂಡು ಬಂದು ಕಾರ್ಮಿಕ ಆಯುಕ್ತರವನ್ನು ಭೇಟಿ ಮಾಡಿಸಿದ್ದಾರೆ. ಇದು ಕಾರ್ಮಿಕ ಇಲಾಖೆಯವರಿಂದ ಏಕೆ ಆಗುವುದಿಲ್ಲ? 'ನಮ್ಮನ್ನೂ ಕೂಡ ಶಾಲೆಗೆ ಸೇರಿಸಿ' ಎಂದು ಆ ಕಂದಮ್ಮಗಳು ಬಹಳ ಆಸೆಯಿಂದ ಹೇಳುತ್ತಾರೆ. 'ನಮ್ಮವರು ಬಂದಾಗ ನೀವು ಏಕೆ ಕಾಣುವುದಿಲ್ಲ? ಎಂದು ಆಯುಕ್ತರು ಕೇಳಿದರಂತೆ. ಅದಕ್ಕೆ ಕುಮಾರಿ ರಂಗಮಂಚಮ್ಮ ಎನ್ನುವ ಒಬ್ಬ ಹುಡುಗಿ ಹೇಳುತ್ತಾಳೆ, 'ನೀವು ಬರುವುದು ಅವರಿಗೆ ಗೊತ್ತಾಗಿಬಿಡುತ್ತದೆ, ಆಗ ನಮ್ಮನ್ನು ಅವರು ಅಡುಗೆ ಮನೆಯಲ್ಲೋ, ಬಚ್ಚಲು ಮನೆಯಲ್ಲೋ ಕೂಡಿ ಹಾಕುತ್ತಾರೆ, ಇಲ್ಲದಿದ್ದರೆ ಓಡಿಸಿ ಬಿಡುತ್ತಾರೆ' ಎಂದು ಹೇಳುತ್ತಾಳೆ. ಅಂದರೆ ಇವರು ಎಷ್ಟು ಸರ್‌ಪ್ರೈಸ್ ವಿಸಿಟ್ ಮಾಡುತ್ತಾರೆ ಎಂಬುದು ಇದರಿಂದ ನಮಗೆ ಗೊತ್ತಾಗುತ್ತದೆ. 15ನೇ ತಾರೀಖು ಬೆಳಿಗ್ಗೆ 8 ಗಂಟೆಗೆ ಸರ್‌ಪ್ರೈಸ್ ವಿಸಿಟ್ ಬರುತ್ತಿದ್ದೇವೆಂದು ಇವರು ಸರ್ಕ್ಯುಲರ್ ಕಳುಹಿಸುತ್ತಾರೆ. ಬಾಲ ಕಾರ್ಮಿಕರ ಸಮೀಕ್ಷೆ ನಡೆಸುವುದು ಏನಿದೆ ಇದು ಅಕಾಡೆಮಿಕ್ ಇಂಟರೆಸ್ಟ್ ಆ ಸಮೀಕ್ಷೆ ಪಾಡಿಗೆ ಸಮೀಕ್ಷೆ ನಡೆಯಲಿ. ಬಾಲ ಕಾರ್ಮಿಕರಿಗೆ ಶಿಕ್ಷಣ ಕೊಡಬೇಕು, ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬಾರದೆಂದು ಹೇಳುತ್ತೇವೆ. ಈ ಬಾಲ ಕಾರ್ಮಿಕರ ಜೀತದಾಳು ಸಮಸ್ಯೆಯನ್ನು ತಡೆಯಲಿಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದರ ಜೊತೆಗೆ ಹಿಂದೆ ಕೂಡ ಮಾನ್ಯ ಕಾಗೋಡು ತಿಮ್ಮಪ್ಪನವರು ಬಾಲ ಭಿಕ್ಷುಕರ ಹಾವಳಿಯನ್ನು ತಡೆಗಟ್ಟುತ್ತೇವೆಂದು ಹೇಳಿದ್ದರು. ಆದರೆ ಇವತ್ತಿಗೂ ಕೂಡ ಬಾಲ ಭಿಕ್ಷಾಟನೆಯನ್ನು ನಿರ್ಮೂಲನೆ ಮಾಡುವುದಕ್ಕೆ ಆಗಿಲ್ಲ. ಬಾಲಕರು ಅದೇ ತರಹ ಶರ್ಟ್, ಬನಿಯನ್ ಬಿಚ್ಚಿಕೊಂಡು ಓಡಾಡುತ್ತಿರುತ್ತಾರೆ. ಆದ್ದರಿಂದ ಬಾಲ ಕಾರ್ಮಿಕರ ಬಗ್ಗೆ ಸಮೀಕ್ಷೆ ನಡೆಸುವುದನ್ನು ಬಿಟ್ಟು ಬೇರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎ.ಎಂ.ಹಿಂಡಸಗೇರಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಬಾಲ ಕಾರ್ಮಿಕರ ಸಮೀಕ್ಷೆ ಕೆಲಸ ಈಗಾಗಲೇ ನಡೆದಿದೆ. ಎಲ್ಲೆಲ್ಲಿ ಬಾಲ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಅವರನ್ನು ನಮ್ಮ ಇಲಾಖೆ ಮತಿಯಿಂದ ಕಂಡುಹಿಡಿದು ಶಾಲೆಗೆ ಸೇರಿಸುವುದು ಅಥವಾ ಬಾಲ ಕಾರ್ಮಿಕರನ್ನು ಯಾರು ಕೆಲಸಗಳಿಗೆ ಇಟ್ಟುಕೊಳ್ಳುತ್ತಾರೆ ಅವರಿಗೆ ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅಂಥವರ ಮೇಲೆ ಈಗಾಗಲೇ ನಾವು ಕ್ರಮ

ಜರುಗಿಸುತ್ತಿದ್ದೇವೆ. ಸ್ಪೆಸಿಫಿಕ್ ಆಗಿ ತಾವು ಏನು ಹೇಳಿದಿರಿ ಅದನ್ನು ತರಿಸಿ ನೋಡಿ ಯಾರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ, ಈ ಪಿಡುಗು ನಿರ್ಮೂಲನೆಗಾಗಿ ಸರ್ಕಾರ ಬೇರೆ ಬೇರೆ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಈ ಕೆಲಸಕಾರ್ಯಗಳನ್ನು ಯಾರು ಮಾಡುತ್ತಾರೆ? ಅಂಗನವಾಡಿ ಕಾರ್ಯಕರ್ತರು, ಪಂಚಾಯತಿ ಕಾರ್ಯದರ್ಶಿ ಇವರಿಗೆ ಏನಾದರೂ ವಹಿಸಿಕೊಟ್ಟಿದ್ದೀರಾ? ನಮ್ಮ ಭಾಗಗಳಲ್ಲಿ ಅಂಗನವಾಡಿ ಕಾರ್ಯಕರ್ತರು, ಮತ್ತು ಪಂಚಾಯತಿ ಕಾರ್ಯದರ್ಶಿಯವರು ಒಂದು ರೀತಿಯಾಗಿ ಸಮೀಕ್ಷೆ ಮಾಡುವುದು, ಒತ್ತಡಗಳನ್ನು ಹಾಕುವಂಥಾದ್ದು ಈ ರೀತಿ ಗ್ರಾಮಾಂತರ ಮಟ್ಟದಲ್ಲಿ ನಡೆಯುವಂಥಾದ್ದು ನನ್ನ ಗಮನಕ್ಕೆ ಬಂದಿದೆ, ಇದು ತಮ್ಮ ಗಮನಕ್ಕೆ ಏನಾದರೂ ಬಂದಿದೆಯೇ? ಹಾಗೆ ಬಂದಿದ್ದರೆ ಇದರ ಬಗ್ಗೆ ನೀವು ಎನ್‌ಕ್ವೈರಿ ಮಾಡಿಸುತ್ತೀರಾ? ಇಂಥವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಎ.ಎಂ.ಹಿಂಡಸಗೇರಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಅವರು ಏನು ಹೇಳಿದ್ದಾರೆ ಅದನ್ನು ನಾನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೆ, 2001-2002ನೇ ಸಾಲಿನಲ್ಲಿ 98 ಲಕ್ಷ ರೂಪಾಯಿಗಳು ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾಗಿದೆಯೆಂದು ಹೇಳಿದ್ದಾರೆ. ನಮ್ಮ ಉಡುಪಿ ಜಿಲ್ಲೆಗೆ 3 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಈ ಹಣ ಡೈವರ್ಟ್ ಆಗಿದೆಯೆಂದು ನನಗೆ ನಂಬಲರ್ಹ ಮೂಲಗಳಿಂದ ತಿಳಿದುಬಂದಿದೆ. ಅದನ್ನು ದಯವಿಟ್ಟು ತಾವು ತನಿಖೆ ಮಾಡಬೇಕು. ಈ ಮೂರು ಲಕ್ಷ ರೂಪಾಯಿಗಳು ಎಲ್ಲಿಗೆ ಡಿವಿಎಟ್ ಆಗಿದೆ ಎಂಬುದನ್ನು ದಯವಿಟ್ಟು ತನಿಖೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಎಂ.ಹಿಂಡಸಗೇರಿ:- ಮಾನ್ಯ ಅಧ್ಯಕ್ಷರೆ, ಅದು ಡೈವರ್ಟ್ ಆಗಿದ್ದರೆ ಯಾರು ಡೈವರ್ಟ್ ಮಾಡಿದ್ದಾರೆ ಅವರ ವಿರುದ್ಧ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಸರಿ ಇದ್ದರೆ ನಾನು ಅವರಿಗೆ ಇನ್‌ಫಾರ್ಮೇಷನ್ ಕೊಡುತ್ತೇನೆ.

ತುರುವೇಕೆರೆ ತಾಲ್ಲೂಕಿಗೆ ರಸ್ತೆ ಕಾಮಗಾರಿಗೆ ಅನುದಾನ ಒದಗಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 63(1340)